ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯಕರ್ನಾಟಕ ದಿನಾಂಕ : DATE : 09/07/2019

## ತಿದ್ದುಪಡಿ ವಿಧೇಯಕಕ್ಕೆ ರಾಜ್ಯಸಭೆಯಲ್ಲೂ ಸಿಕ್ಕ ಸಮ್ಮತಿ

# ಆಧಾರ್ ಇನ್ನು ಕಡ್ಡಾಯವಲ್ಲ

**ಹೊಸದಿಲ್ಲಿ:** ಬ್ಯಾಂಕ್ ಖಾತೆ ತೆರೆಯಲು ಹಾಗೂ ಸಿಮ್ ಕಾರ್ಡ್ ಖರೀದಿ ಸೇರಿದಂತೆ ಇತರೆ ಉದ್ದೇಶಗಳಿಗೆ ಸ್ವಯಂ ಪ್ರೇರಿತವಾಗಿ ಆಧಾರ್ ಕಾರ್ಡ್ ಅನ್ನು ಗುರುತಿನ ಸಾಕ್ಷ್ಯಕ್ಕೆ ಬಳಸಲು ಅವಕಾಶ ನೀಡುವ 'ಆಧಾರ್ ತಿದ್ದುಪಡಿ ವಿಧೇಯಕ'ಕ್ಕೆ ರಾಜ್ಯಸಭೆ ಸೋಮವಾರ ಅಂಗೀಕಾರ ನೀಡಿದೆ. ಹೀಗಾಗಿ ಆಧಾರ್ ಇನ್ನುಮುಂದೆ ಕಡ್ಡಾಯವಲ್ಲ, ಆಧಾರ್ ಮಾಹಿತಿ ನೀಡುವುದು ವ್ಯಕ್ತಿಯ ಐಚ್ಛಿಕ ನಿರ್ಧಾರವಾಗಿರುತ್ತದೆ.

''ಆಧಾರ್ ಬಳಕೆ ಸಂಪೂರ್ಣ ಸ್ವಯಂ ಪ್ರೇರಿತವಾದದ್ದು, ಅದರ ಬಳಕೆಗೆ ಮೊದಲು ಸಂಬಂಧಿತ ವ್ಯಕ್ತಿಯ ಸಮ್ಮತಿ ಪಡೆಯಲಾಗುತ್ತದೆ. ಆಧಾರ್ ಡೇಟಾ ಕೂಡ ಸುರಕ್ಷಿತವಾಗಿರುತ್ತದೆ,'' ಎಂದು ವಿಧೇಯಕ ಮಂಡಿಸಿ ಮಾತನಾಡಿದ ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ರವಿಶಂಕರ್ ಪ್ರಸಾದ್ ಭರವಸೆ ನೀಡಿದರು. ಸರಕಾರದ ಸಬ್ಸಿಡಿ ಯೋಜನೆಗಳ ದುರ್ಬಳಕೆ ತಡೆಯುವ ದಿಸೆಯಲ್ಲಿ ಆಧಾರ್ ಮಹತ್ವದ ಪಾತ್ರ ನಿರ್ವಹಿಸಬಲ್ಲದು ಎನ್ನುವುದನ್ನು ಖುದ್ದು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ ಎನ್ನುವುದನ್ನು ಅವರು ನೆನಪಿಸಿದರು. ಕಳೆದ ಗುರುವಾರ ವಿಧೇಯಕಕ್ಕೆ ಲೋಕಸಭೆ ಅಂಗೀಕಾರ ನೀಡಿತ್ತು.

ಆಧಾರ್ ದುರ್ಬಳಕೆ ಮಾಡಿಕೊಂಡು ವೈಯಕ್ತಿಕ ಮಾಹಿತಿ ಕದಿಯುವವರ ವಿರುದ್ಧ ಸರಕಾರ ಅತಿ ಕಠಿಣ ಕ್ರಮಗಳನ್ನು ಕೈಗೊಳ್ಳಲಿದೆ. ಗೌಪ್ಯತೆ ಮತ್ತು ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿ ಡೇಟಾ ಕದ್ದು ಸಿಕ್ಕಿ ಬಿದ್ದರೆ ಅಂಥವರ ವಿರುದ್ಧ 1 ಕೋಟಿ ರೂ. ದಂಡ ಹಾಗೂ ಅಪರಾಧದ ಸ್ವರೂಪ ಆಧರಿಸಿ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಆಧಾರ್ ಇಲ್ಲವೆಂದ ಮಾತ್ರಕ್ಕೆ ಯಾವುದೇ ಸೇವೆ ಅಥವಾ ಯೋಜನೆಯ ಲಾಭವನ್ನು ಗ್ರಾಹಕರಿಗೆ ನಿರಾಕರಿಸುವಂತಿಲ್ಲ ಎಂಬುದನ್ನು ವಿಧೇಯಕ ಸ್ಪಷ್ಟವಾಗಿ ಹೇಳುತ್ತದೆ.

ಟೆಲಿಫೋನ್ ಸಂಪರ್ಕ ಪಡೆಯಲು ಆಧಾರ್ ಕಾರ್ಡ್ ಒದಗಿಸುವುದು ಕಡ್ಡಾಯವಲ್ಲ, ಅದು ಐಚ್ಛಿಕ. ಇದಕ್ಕಾಗಿಯೇ ಟೆಲಿಫೋನ್ ಕಾಯಿದೆಗೆ ತಿದ್ದುಪಡಿ ತರಲಾಗಿದೆ. ಆಧಾರ್ ಅಥವಾ ಪಾಸ್‌ಪೋರ್ಟ್ ನಂತಹ ಇತರೆ ಯಾವುದೇ ದೃಢೀಕೃತ ದಾಖಲೆಗಳನ್ನು ಕೂಡ ಗ್ರಾಹಕರು ಒದಗಿಸಬಹುದಾಗಿದೆ ಎಂದು ರವಿಶಂಕರ್ ಪ್ರಸಾದ್ ಸ್ಪಷ್ಟಪಡಿಸಿದರು.



**130** ಕೋಟಿ ಭಾರತದ ಜನಸಂಖ್ಯೆ

**123.81** ಕೋಟಿ ಆಧಾರ್ ಕಾರ್ಡ್ ಹೊಂದಿದವರ ಸಂಖ್ಯೆ

**69.38** ಕೋಟಿ ಆಧಾರ್ ಜತೆ ಜೋಡಣೆಯಾದ ಮೊಬೈಲ್ ಸಂಖ್ಯೆಗಳು

### ದುರ್ಬಳಕೆಗೆ ಭಾರಿ ದಂಡ

- ಬ್ಯಾಂಕಿಂಗ್ ಅಥವಾ ಟೆಲಿಫೋನ್ ಕಂಪನಿಗಳು ನಿಯಮ ಉಲ್ಲಂಘಿಸಿ ಆಧಾರ್ ಡೇಟಾ ದುರ್ಬಳಕೆ ಮಾಡಿಕೊಂಡರೆ ಅಂಥವರ ವಿರುದ್ಧ 1 ಕೋಟಿ ರೂ. ಅಥವಾ ದಿನಕ್ಕೆ 10 ಲಕ್ಷ ರೂ. ದಂಡ.
- ಟೆಲಿಫೋನ್ ಕಾಯಿದೆ-1885 ಮತ್ತು ಅಕ್ರಮ ಹಣಕಾಸು ತಡೆ ಕಾಯಿದೆ-2002ರ ಅಡಿಯಲ್ಲಿ ಕೆವೈಸಿ ದೃಢೀಕರಣಕ್ಕೆ ಆಧಾರ್ ನಂಬರ್ ಒದಗಿಸುವುದು ಕಡ್ಡಾಯವಲ್ಲ, ಅದು ಗ್ರಾಹಕರ ಮರ್ಜಿಗೆ ಬಿಟ್ಟ ವಿಷಯ.
- ನಿಯಮ ಉಲ್ಲಂಘಿಸಿದ 6 ಲಕ್ಷ ಆಧಾರ್ ಕಾರ್ಡ್ ಆಪರೇಟಿಂಗ್ ಕೇಂದ್ರಗಳ ಪೈಕಿ 50 ಸಾವಿರ ಕೇಂದ್ರಗಳ ಪರವಾನಿಗೆ ರದ್ದು.